ಆಕೆಯ ಮಗಳ ಮದುವೆಗೆ ಒಂದು ಸಣ್ಣ ಮಾಸಿದ ಡಬ್ಬಿ, ಆ ಡಬ್ಬಿಯೊಳಗೆ ಹತ್ತಾರು ಒಣಗಿದ ಎಲೆಗಳನ್ನು ಇಟ್ಟು ಕಾಣಿಕೆಯಾಗಿ ಕೊಟ್ಟಿದ್ದಳು. ಅದರ ಜೊತೆ ಪ್ರತ್ಯೇಕವಾಗಿ ತನ್ನ ಕೈಯಿಂದಲೇ ಬರೆದ ಒಂದು ಕಾಗದವನ್ನು ಮಗಳ ಕೈಗೆ ಸಾಗಿಸಿದ್ದಳು. ಆ ಕಾಗದದಲ್ಲಿ ಕೆಳಗಿನಂತೆ ಬರೆದಿದ್ದಳು:

"ಈ ಡಬ್ಬಿ ಸವಕಳಿಯಾಗಿದೆ ಎಂದು ಎಲ್ಲಿಯೂ ಒಗೆಯಬೇಡ. ಅದರ ಒಳಗೆ ಬಸರಿಗಿಡದ ಒಣಗಿದ ಎಲೆಗಳಿವೆ. ಈ ಒಣಗಿದ ಎಲೆಗಳನ್ನು ಒಮ್ಮೆಯಾದರೂ ದಿಟ್ಟಿಸಿ ನೋಡಿರುವೆಯಾ? ಅವುಗಳಲ್ಲಿ ಸಜೀವ ನರಗಳಿವೆ, ಉಸಿರಾಟವಿದೆ, ಅವು ನಮ್ಮಂತೆಯೇ ಇವೆ. ನೀನು ತಿಳಿದಂತೆ ಬದುಕು ಯಾವಾಗಲು ಹಸಿರಾಗಿರುವುದಿಲ್ಲ. ಅದು ಈ ಒಣಗಿದ ಎಲೆಗಳಂತೆಯೇ ಇರುತ್ತದೆ. ಈ ಎಲೆಗಳು ಮುರಿಯದಂತೆ ಅವುಗಳನ್ನು ಯಾವಾಗಲು ರಕ್ಷಿಸು. ಅವುಗಳಲ್ಲಿ ಕಣ್ಣುಗಳಿವೆ. ಜೀವವಿದೆ. ಶಕ್ತಿ ಹರಿದಾಡುತ್ತಿದೆ. ಬದುಕು ಬಹುವಿಧದಲ್ಲಿ ಹಬ್ಬಿಕೊಂಡಿದೆ. ಅವುಗಳನ್ನು ನೋಡುವ ನಿನ್ನದೇ ಆದ ಸಾತ್ವಿಕವಾದ ಭಾವನೆಗಳು ಇರಬೇಕು. ನಿನ್ನ ಸುತ್ತಲಿನಲ್ಲಿರುವ ಎಲ್ಲರಿಗೂ ಅನುಕಂಪ ತೋರಿಸು. ಈ ಡಬ್ಬಿ ಬಹಳ ಹಳೆಯದಾಗಿ ಕಾಣಿಸುತ್ತಿರಬಹುದು, ಸವಕಳಿಯಾಗಿರಬಹುದು, ಅಲ್ಲಲ್ಲಿ ಜಿಗಿಹತ್ತಿರಬಹುದು, ನೋಡಲು ಅಷ್ಟು ಆಕರ್ಷಕವಾಗಿಲ್ಲದಿರಬಹುದು, ಇದು ಅಲ್ಲಲ್ಲಿ ನೆಗ್ಗಿದಂತೆ, ಕಪ್ಪಾದಂತೆ, ಕಾಣುತ್ತಿರಬಹುದು. ಆದರೆ ಇದು ನಿನಗೊಬ್ಬಳಿಗೇ ಗೊತ್ತಿರಲಿ. ಇದು ಬಂಗಾರದ್ದು. ಇದರ ಜೊತೆ, ಅದರ ಒಳಗಡೆ ಇರುವ ಎಲೆಗಳನ್ನು ಜೋಪಾನವಾಗಿ ರಕ್ಷಿಸಿಕೊ."

ಇನ್ನೊಂದು ಮಧ್ಯ ಗಾತ್ರದ ಪಾರದರ್ಶಕವಾದ ಬಾಟಲಿ. ಅದಕ್ಕೆ ಸರಿಯಾಗಿ ಬೂಚು ಹಾಕಿದ್ದಳು. ಅದಕ್ಕೊಂದು ಚೀಟಿ ಅಂಟಿಸಿದ್ದಳು: "ಇದರಲ್ಲಿರುವವು ಬಿಳಿ ಪಾರಿಜಾತದ ಹೂಗಳು. ಅವು ರಾತ್ರಿಯೆಲ್ಲಾ ಅರಳಿ, ಬೆಳಿಗ್ಗೆ ಭೂಮಿಗೆ ಉದುರುವುದು ಅವುಗಳ ಬದುಕಿನ ಕತೆಯೇ ಆಗಿದೆ. ಈ ಹೂವುಗಳು ರಾತ್ರಿಯೆಲ್ಲಾ ಅರಳಿ, ಬೆಳಿಗ್ಗೆ ನೆಲಕ್ಕೆ ಬಿದ್ದಿದ್ದನ್ನು ನೋಡಿ ಅವುಗಳ ಮೇಲೆ ನನ್ನ ಕಣ್ಣೀರಿನ ಹನಿಗಳು ತಾವಾಗಿಯೇ ಉರುಳಿದ್ದವು. ನನ್ನ ಕಣ್ಣೀರಿನ ಹನಿಗಳು ಹಾಗು ಹೂಗಳು ಒಂದರೊಳಗೊಂದು ಕೂಡಿಹೋಗಿದ್ದವು. ಆ ಕಣ್ಣೀರಿನ ಹನಿಗಳು ದುಃಖದ್ದೇ ಎಂದು ಹೇಳಲಾರೆ. ಆದರೆ ಅವು ಯಾತರದ್ದು ಎಂದು ನನಗಿನ್ನೂ ಗೊತ್ತಾಗಿಲ್ಲ. ಅವುಗಳಲ್ಲಿ ಕೆಲವನ್ನು ದೇವರಿಗೆ ಏರಿಸಿದೆ, ಇನ್ನು ಕೆಲವನ್ನು ಈ ಗಾಜಿನ ಬಾಟಲಿಯಲ್ಲಿ ಸುರಕ್ಷಿತವಾಗಿ ಇಟ್ಟಿದ್ದೇನೆ. ನನಗೆ ಇವುಗಳನ್ನು ಚೆಲ್ಲಲು ಮನಸ್ಸಾಗಲಿಲ್ಲ. ಜೀವನದುದ್ದಕ್ಕೂ ಅವುಗಳನ್ನು ನೋಡುತ್ತಲೇ ಬಂದೆ. ಅವುಗಳಲ್ಲಿ ನನ್ನ ಮುಖ ಕಾಣುತ್ತಿತ್ತು. ನನ್ನ ಕಳೆದುಹೋದ ಎಲ್ಲ ಗೆಳತಿಯರ ಮುಖಗಳು ಕಾಣುತ್ತಿದ್ದವು. ನನ್ನ ಪ್ರೀತಿಯ, ಪ್ರೀತಿಯ ಕಳೆದುಹೋದ ಎಲ್ಲ ಗೆಳತಿಯರ ಮುಖಗಳು! ಒಂದು ದಿನ ಅವುಗಳಲ್ಲಿ ದೇವರ ಮುಖ ಕಂಡಿತು. ಅವನು ಕೂಡ ನಾನು ಇಲ್ಲಿಯೇ ಇದ್ದೇನೆ ಎಂದು ಹೇಳುತ್ತಿದ್ದ. ನನಗೆ ಬೇರೆ ಜಾಗ ಬೇಡ ಎಂದು ಅಂಗಲಾಚುತ್ತಿದ್ದ. ಹಾಗೆಯೇ ನಗುತ್ತಿದ್ದ. ಆ ದೇವರು ನಿನಗೂ ಕಾಣಿಸಲೆಂದು ಅವುಗಳನ್ನು ಇಲ್ಲಿ ಶೇಖರಿಸಿ ಇಟ್ಟಿದ್ದೇನೆ. ನಿನಗೆ ಬೇಸರವಾದಾಗ, ಅರ್ಥಕಳೆದು ಹೋದಾಗ, ಅರ್ಥಗಳ ಮಹಾ ಹಂಬಲವೆನಿಸಿದಾಗ, ಬೇರೆ ರೀತಿಯ ಹಸಿವೆಯಾದಾಗ, ಈ ಬಾಟಲಿಯನ್ನು ನೋಡು."

ಮತ್ತೊಂದು ಸಣ್ಣಮುಚ್ಚಳದ ಮಣ್ಣಿನ ಕುಡಿಕೆ. ಆ ಮಣ್ಣಿನ ಕುಡಿಕೆ ತೆಗೆದು ನೋಡಿದರೆ ಅದರಲ್ಲಿ ನಮ್ಮ ನೆಲದ ಎರೆ ಹಾಗು ಮಸಾರಿ ಮಣ್ಣಿನ ಮಿಶ್ರಣ ತುಂಬಿದ್ದಳು. ಮಣ್ಣಿನ ಕುಡಿಕೆಯ ಮೇಲೆ 'ಬಂಗಾರದ ಪುಡಿ' ಎಂದು ಬರೆದಿದ್ದಳು. ಆಕೆಯ ವಿಚಾರಗಳು, ಕಪ್ಪು